ಹಂತದಲ್ಲಿದೆ?

2) ಈ ಯೋಜನೆಯ ಅಂದಾಜು ವೆಚ್ಚ ಎಷ್ಟು? ಈ ಯೋಜನೆಯನ್ನು ಯಾರಗೆ ಗುತ್ತಿಗೆ ನೀಡಲಾಗಿದೆ?

3) ಈ ಯೋಜನೆಗಾಗಿ ಎಷ್ಟು ಎಕರೆ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ: ವಶಪಡಿಸಿಕೊಳ್ಳಲಾದ ಭೂಮಿಗೆ ನೀಡಲಾಗಿರುವ ಪರಿಹಾರ ಧನ ಎಷ್ಟು?

4) ಈ ಯೋಜನೆಯು ಇನ್ನೂ ಪ್ರಾರಂಭವಾಗದೇ ಇರುವುದಕ್ಕೆ ಕಾರಣಗಳೇನು?

**ಉತ್ತರ**

1) I) ಉದ್ದೇಶಿತ ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಗಾಗಿ ಭೂಸ್ವಾಧೀನ ಪ್ರಕ್ರಿಯೆಯು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯಡಿ 28(1) ಅಧಿಸೂಚನೆಗಳಾಗಿ, ಒಂದನೇ ಹಂತಕ್ಕೆ ವಿಚಾರಣೆ ಮುಗಿದಿದ್ದು ಅಂತಿಮ ಅಧಿಸೂಚನೆ ಹೊರಡಿಸಬೇಕಾಗಿರುತ್ತದೆ.

II) ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಇಲಾಖೆಯವರು ಬೆಂಗಳೂರು-ಮೈಸೂರು ಮೂಲಸೌಲಭ್ಯ ಕಾರಿಡಾರ್ ಯೋಜನೆಗೆ 8-8-2001ರಲ್ಲಿ ಅನುಮತಿಯನ್ನು ನೀಡಿದೆ.

2) ಸದರಿ ಯೋಜನೆಯ ಅಂದಾಜು ವೆಚ್ಚ 2000 ಕೋಟಿ ರೂಗಳು. ಈ ಯೋಜನೆಯನ್ನು ಮೆಸರ್ಸ್: ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್ ಪೈಸಸ್ ಲಿಮಿಟೆಡ್‌ನವರಿಗೆ ನಿರ್ಮಾಣ ಮಾಡುವ, ಹೊಂದುವ ನಿರ್ವಹಿಸುವ ನಂತರ ಹಸ್ತಾಂತರಿಸುವ(BOOT) ನೀತಿ ಅಡಿಯಲ್ಲಿ ವಹಿಸಿಕೊಡಲಾಗಿದೆ. ಈ ಯೋಜನೆಯ, ಭೂಸ್ವಾಧೀನವನ್ನೂ ಸೇರಿ ಎಲ್ಲಾ ವೆಚ್ಚವನ್ನು ಕಂಪೆನಿಯು ಭರಿಸುತ್ತದೆ.

3) ಭೂಸ್ವಾಧೀನ ಪ್ರಕ್ರಿಯೆಯು ಇನ್ನೂ ಅಂತಿಮವಾಗಿಲ್ಲದ ಕಾರಣ ಜಮೀನಿಗೆ ಪರಿಹಾರ ಧನ ವಿತರಿಸಿರುವುದಿಲ್ಲ

4) ಯೋಜನೆಯ ಕಾಮಗಾರಿಗಳನ್ನು ಪ್ರಾರಂಭಿಸಲು ತನ್ನ ಆರ್ಥಿಕ ಕ್ಲೋಜರ್ (Financial closure)ಗಾಗಿ ಕಾಯುತ್ತಿದೆ ಎಂದು ಸದರಿ ಕಂಪೆನಿಯು ವರದಿ ಮಾಡಿದೆ.

ವಿಶ್ವಬ್ಯಾಂಕ್ ನೆರವಿನಿಂದ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 674(972)

**ಸದಸ್ಯರ ಹೆಸರು: ಅರಗ ಜ್ಞಾನೇಂದ್ರ(ತೀರ್ಥಹಳ್ಳಿ)**

**ಉತ್ತರಿಸುವ ಸಚಿವರು : ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು)**

## ಪ್ರಶ್ನೆ

ಅ) ವಿಶ್ವಬ್ಯಾಂಕ್ ನೆರವಿನ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಸರ್ಕಾರ ಹಮ್ಮಿಕೊಂಡಿದೆಯೇ? ಹಮ್ಮಿಕೊಂಡಿದ್ದಲ್ಲಿ ಈ ಕಾಮಗಾರಿಗಳನ್ನು ಎಷ್ಟು ಹಂತಕ್ಕೆ ಪೂರ್ಣಗೊಳಿಸಲಾಗುವುದು? ಮೊದಲನೆ ಹಂತದ ಕಾಮಗಾರಿ ಕೆಲಸ ಪ್ರಗತಿಯಲ್ಲಿದೆಯೇ?

ಆ) ಈ ಯೋಜನೆಗೆ ವಿಶ್ವಬ್ಯಾಂಕ್ ಸಾಲ ಪಡೆಯಲಾಗುವುದೇ?

ಇ) ಪ್ರತಿ ಕಿ.ಮೀ. ರಸ್ತೆಯ ಮೇಲ್ದರ್ಜೆ ಹಾಗೂ ದುರಸ್ತಿಗೆ ವೆಚ್ಚವಾಗುವ ಹಣವೆಷ್ಟು?

ಈ) ಈ ಕಾಮಗಾರಿಯ ಗುತ್ತಿಗೆದಾರರಿಗೆ ರಸ್ತೆ ನಿರ್ವಹಣೆಗೆ ಸೂಚಿಸಲಾಗಿದೆಯೇ?

## ಉತ್ತರ

ಅ) ಹಮ್ಮಿಕೊಂಡಿದೆ. ಈ ಕಾಮಗಾರಿಯನ್ನು ಎರಡು ಹಂತಗಳಲ್ಲಿ ಪೂರ್ಣಗೊಳಿಸಲಾಗುವುದು. ಮೊದಲನೇ ಹಂತದ ಕಾಮಗಾರಿ ಪ್ರಗತಿಯಲ್ಲಿದೆ.

ಆ) ಪಡೆಯಲಾಗುವುದು.

ಇ) ಪ್ರತಿ ಕಿಮಿ. ರಸ್ತೆಯ ಮೇಲ್ದರ್ಜೆಗೇರಿಸುವ ಸಿವಿಲ್ ಕಾಮಗಾರಿಗಳಿಗಾಗಿ ತಗಲುವ ಸುಮಾರು ವೆಚ್ಚ 83 ಲಕ್ಷ ರೂ.ಗಳು.

ಪುನಶ್ಚೇತನ(ದುರಸ್ತಿ)ಗೊಳಿಸಲು ತಗಲುವ ವೆಚ್ಚ ಸುಮಾರು 30 ಲಕ್ಷ ರೂ.ಗಳು.

ಈ) ಮೇಲ್ದರ್ಜೆಗೇರಿಸುವ ಕಾಮಗಾರಿಯು ಪೂರ್ಣಗೊಳ್ಳುವವರೆಗೆ ರಸ್ತೆ ನಿರ್ವಹಣೆಯನ್ನು ಗುತ್ತಿಗೆದಾರರಿಗೆ ವಹಿಸಲಾಗುವುದು.

ಪುನಶ್ಚೇತನಗೊಳಿಸುವ ಕಾಮಗಾರಿಯ ರಸ್ತೆ ನಿರ್ವಹಣೆಯನ್ನು ಗುತ್ತಿಗೆದಾರರಿಗೆ ವಹಿಸುವುದಿಲ್ಲ.